ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ:ಕವಿಪ್ರನಿನಿ:ಬಿ7/1425/98-99 ಸಂ.1

ದಿನಾಂಕ : 6 AUG 2020

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ಮೈಸೂರು/ತುಮಕೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮಾನ್ಯರೆ,

ವಿಷಯ: Prohibitory Orders issued by the Session Courts in Execution cases - ಭೂಸ್ವಾಧೀನ ಮತ್ತು ವಿದ್ಯುತ್ ಕಾಮಗಾರಿಗಳಿಗೆ ಸಂಬಂಧಿಸಿದಂಥಹ ನ್ಯಾಯಾಲಯ ಪ್ರಕರಣಗಳಲ್ಲಿ ಕೂಡಲೇ ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ: 1. ನಿಗಮದ ಸುತ್ತೋಲೆ ಸಂಖ್ಯೆ:ಕವಿಪ್ರನಿನಿ/ಬಿ7/5841/92-93 ದಿನಾಂಕ:18.07.2017.
2. ನಿಗಮದ ಪತ್ರ ಸಂಖ್ಯೆ:ಕವಿಪ್ರನಿನಿ/ಬಿ118/14501/20-21 ದಿನಾಂಕ:06.07.2020.

******

ಭೂಸ್ವಾಧೀನ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶಾನ್ವಯ ಹೆಚ್ಚುವರಿ ಪರಿಹಾರ ಪಾವತಿ ಮಾಡುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವಧ ಹಂತದ ಅಧಿಕಾರಿಗಳ ಜವಾಬ್ದಾರಿಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಉಲ್ಲೇಖ(1) ಸುತ್ತೋಲೆಯ ಮೂಲಕ ಸುಧೀರ್ಘವಾಗಿ ತಿಳಿಸಲಾಗಿದೆ. ಈ ಸುತ್ತೋಲೆಯಲ್ಲಿ, ಯಾವುದೇ ಕಾರಣದಿಂದ ಮಾನ್ಯ ನ್ಯಾಯಾಲಯದ ಆದೇಶವನ್ನು ಪಾಲಿಸುವಲ್ಲಿ ವಿಳಂಬವಾಗುವುದು/ ಅಥವಾ ಆಡಳಿತಾತ್ಮಕ ಕಾರಣದಿಂದ / ಪತ್ರ ವ್ಯವಹಾರಗಳಿಂದ, ಭೂಸ್ವಾಧೀನದ ಹೆಚ್ಚುವರಿ ಪರಿಹಾರ ಮೊತ್ತದಲ್ಲಿ ಅನಾವಶ್ಯಕ ಬಡ್ಡಿ ಮೊತ್ತವನ್ನು ಪಾವತಿ ಮಾಡುವುದನ್ನು ಹಾಗೂ ನ್ಯಾಯಾಲಯದ ನಿಂದನೆಯನ್ನು(ಇ.ಪಿ ಯ ಮೂಲಕ) ತಡೆಗಟ್ಟುವುದಾಗಿರುತ್ತದೆ ಎಂದೂ ಸ್ಪಷ್ಟಪಡಿಸಲಾಗಿದೆ. ಅನಗತ್ಯ ವಿಳಂಬಗಳಿಂದ ನಿಗಮವು ಹೆಚ್ಚಿನ ಹಣ ಪಾವತಿಸಬೇಕಾದಲ್ಲಿ ಅಂಥಹ ಪಾವತಿಗೆ ಕಾರಣರಾದವರನ್ನು ಸಂಪೂರ್ಣ ಜವಾಬ್ದಾರರನ್ನಾಗಿಸಲಾಗುವುದು ಎಂದೂ ಈ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು, Prohibitory Orders issued by the Session Courts in Execution cases – ಭೂಸ್ವಾಧೀನ ಮತ್ತು ವಿದ್ಯುತ್ ಕಾಮಗಾರಿಗಳಿಗೆ ಸಂಬಂಧಿಸಿದಂಥಹ ನ್ಯಾಯಾಲಯ ಪ್ರಕರಣಗಳಲ್ಲಿ R.B.I ನವರು ನೇರವಾಗಿ ಸರ್ಕಾರದ ಖಾತೆಗೆ ಖರ್ಚು ಹಾಕುತ್ತಿರುವುದನ್ನು ಗಮನಕ್ಕೆ ತರುತ್ತಾ, attachment ಗೆ ಬರುವಂಥಹ ಪ್ರಕರಣಗಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸಿದ್ದು, ಈ ಸಂಬಂಧ, ತಮ್ಮ ವಲಯ ವ್ಯಾಪ್ತಿಯ ಎಲ್ಲ ಕಛೇರಿಗಳಿಗೆ ನ್ಯಾಯಾಲಯದ ಪ್ರರಕಣಗಳನ್ನು ಹೆಚ್ಚಿನ ಆದ್ಯತೆ ನೀಡಿ ಕವಿಪ್ರನಿನಿ ಗೆ ಯಾವುದೇ ರೀತಿಯ ವ್ಯತಿರಿಕ್ತ ಅದೇಶಗಳು ಬಾರದೆ ಇರುವ ಹಾಗೆ ಕ್ರಮ ವಹಿಸಲು ಉಲ್ಲೇಖ(2) ರ ಪತ್ರದಲ್ಲಿ ಸೂಚಿಸಲಾಗಿದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನ್ಯಾಯಾಲಯದ ನಿಂದನೆಯನ್ನು(ಇ.ಪಿ ಪ್ರಕರಣಗಳು) ತಡೆಗಟ್ಟುವಲ್ಲಿ ಮುಂಜಾಗ್ರತೆ ವಹಿಸುವುದು. ಒಂದು ವೇಳೆ ಇಂಥಹ ಪಕರಣಗಳು ಉದ್ಭವಿಸಿದಲ್ಲಿ, ಅಂಥಹ Execution cases ಗಳಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ಮೇಲೆ ತಮ್ಮ ಹಂತದಲ್ಲಿಯೇ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಿ, ತೆಗೆದುಕೊಂಡ ಕ್ರಮಕ್ಕೆ ವರದಿಯನ್ನು ನಿಗಮ ಕಾರ್ಯಾಲಯಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಿದೆ.

ತಮ್ಮ ವಿಶ್ವಾಸಿ,
ಸಹಿ/-

ಪ್ರತಿ:ಮಾಹಿತಿಗಾಗಿ:

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ-ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ(ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
2. ಅಧೀಕ್ಷಕ ಇಂಜಿನಿಯರ್(ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು, ಟಿ.ಎಲ್ ಅಂಡ್.ಎಸ್ ವಿಭಾಗ/ ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ಕಾಮಗಾರಿ), ಕವಿಪ್ರನಿನಿ.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕಾನೂನು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

5/8/2020
ಉಪ-ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)